SL. No. : TTTT

ಒಟ್ಟು ಪ್ರಶ್ನೆಗಳ ಸಂಖ್ಯೆ : 34 ]
Total No. of Questions : 34 ]

**CCE RF**
**CCE RR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 90-EK** | **NSQF LEVEL-2** | **Code No. : 90-EK**

# ವಿಷಯ : ಬ್ಯೂಟಿ ಮತ್ತು ವೆಲ್‌ನೆಸ್

# Subject : Beauty & Wellness

**( ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರಗಳು / Kannada and English Versions )**

**( ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater )**

ದಿನಾಂಕ : 04. 04. 2018 ]
ಸಮಯ : ಬೆಳಿಗ್ಗೆ 9-30 ರಿಂದ ಬೆಳಿಗ್ಗೆ 11-45 ರವರೆಗೆ ]
ಗರಿಷ್ಠ ಅಂಕಗಳು : 60 ]

[ Date : 04. 04. 2018
[ Time : 9-30 A.M. to 11-45 A.M.
[ Max. Marks : 60

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

***General Instructions to the Candidate :***

1. ಈ ಪ್ರಶ್ನೆಪತ್ರಿಕೆಯು 34 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

   This Question Paper consists of 34 objective and subjective types of question.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

   This question paper has been sealed by reverse jacket. You have to cut on the right side to open the paper at the time of commencement of the examination. Check whether all the pages of the question paper are intact.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

   Follow the instructions given against both the objective and subjective types of questions.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

   Figures in the right hand margin indicate maximum marks for the question.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

   The maximum time to answer the paper is given at the top of the question paper. It includes 15 minutes for reading the question paper.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**



https://www.karnatakaboard.com/

I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : $10 \times 1 = 10$

*Four* alternatives are given for each of the following questions / incomplete statements. Choose the correct alternative and write the complete answer along with its question number and alphabet :

1. ಕೊಬ್ಬಿನಲ್ಲಿ ಕರಗುವ ಜೀವಸತ್ವ

   (A) ಬಿ $_1$ (B) ಸಿ

   (C) ಡಿ (D) ಬಿ $_{12}$

   The vitamin that is soluble in fat is

   (A) $B_1$ (B) $D$

   (C) $C$ (D) $B_{12}$

2. ಉಗುರುಗಳ ಅಂಚನ್ನು ನಯವಾಗಿ ತೀಡಿ ಬೇಕಾದ ಆಕಾರ ಕೊಡುವುದಕ್ಕೆ ಬಳಸುವ ಸಾಧನ

   (A) ಉಗುರು ಕತ್ತರಿ (ನೈಲ್ ಕಟರ್)

   (B) ಉಗುರು ಅರ (ನೈಲ್ ಫೈಲರ್)

   (C) ಹೊರ ಪೊರೆ ಸಂಸ್ಕಾರಕ (ಕ್ಯೂಟಿಕಲ್ ಸಾಫ್ಟ್‌ನರ್)

   (D) ಹೊರ ಪೊರೆ ಕತ್ತರಿ (ಕ್ಯೂಟಿಕಲ್ ಕಟರ್)

   A tool used to gently grind down and shape the edge of the nail is

   (A) Nail cutter (B) Nail filer

   (C) Cuticle softener (D) Cuticle cutter

3. ಸಲೂನ್‌ನಲ್ಲಿ ಸಾಧನ–ಸಲಕರಣೆಗಳ ಮೇಲ್ಮೈನಲ್ಲಿರುವ ರೋಗಕಾರಕಗಳನ್ನು ನಿವಾರಿಸುವ ಪ್ರಕ್ರಿಯೆ

   (A) ಸ್ಯಾನಿಟೈಸೇಷನ್ (B) ಸ್ಟೆರಿಲೈಸೇಷನ್

   (C) ಇಮ್ಯುನೈಸೇಷನ್ (D) ವ್ಯಾಕ್ಸಿನೇಷನ್

   In a salon the process of reducing the pathogens on the surface of tools is

   (A) Sanitization (B) Sterilization

   (C) Immunization (D) Vaccination

4. ಪೆಡಿಕ್ಯೂರ್‌ನಲ್ಲಿ ಕ್ಯೂಟಿಕಲ್ ಪುಷರನ್ನು ಬಳಸುವುದು

   (A) ಕ್ಯೂಟಿಕಲನ್ನು ಹಿಂಬದಿಗೆ ತಳ್ಳಲು (B) ಸತ್ತ ಕ್ಯೂಟಿಕಲ್ ಕೋಶಗಳನ್ನು ಹೊರಹಾಕಲು

   (C) ಒರಟಾದ ಕ್ಯೂಟಿಕಲನ್ನು ಮೃದುವಾಗಿಸಲು (D) ಒಣ ಕ್ಯೂಟಿಕಲನ್ನು ಕೆರೆಯಲು

   During pedicure, cuticle pusher is used to

   (A) roll back the cuticle (B) remove the dead cuticle cells

   (C) soften the hard cuticle (D) scrap the dry cuticle

5. ಈ ಕೆಳಗಿನವುಗಳಲ್ಲಿ ಟೂ–ಇನ್–ಒನ್ ಫೌಂಡೇಶನ್ ಯಾವುದೆಂದರೆ

   (A) ಮಾಯಿಶ್ಚರೈಸಿಂಗ್ ಫೌಂಡೇಶನ್ (B) ಆಯಿಲ್ ಫ್ರೀ ಫೌಂಡೇಶನ್

   (C) ಕೆನೆ/ಕ್ರೀಮ್ ಫೌಂಡೇಶನ್ (D) ಪೌಡರ್ ಫೌಂಡೇಶನ್

   The two-in-one foundation among the following is

   (A) moisturising foundation (B) oil free foundation

   (C) cream foundation (D) powder foundation



https://www.karnatakaboard.com/

6. ನಿಮ್ಮ ಗ್ರಾಹಕರ ಕೂದಲಿನ ಆರೈಕೆಗಾಗಿ ನೀವು ನೀಡುವ ಉತ್ತಮ ಅಭ್ಯಾಸದ ಸಲಹೆ
   (A) ಕೂದಲನ್ನು ಬಿಸಿ ನೀರಿನಿಂದ ತೊಳೆಯುವುದು
   (B) ಕೂದಲನ್ನು ದೀರ್ಘಕಾಲ ಬಾಚಿಕೊಳ್ಳುವುದು
   (C) ಶಾಂಪೂ ಮಾಡಿದ ನಂತರ ಕೂದಲನ್ನು ತಂಪಾದ ನೀರಿನಿಂದ ತೊಳೆಯುವುದು
   (D) ಶಾಂಪೂ ಮಾಡುವಾಗ ಕೂದಲಿನ ತುದಿಯನ್ನು ಚೆನ್ನಾಗಿ ಉಜ್ಜುವುದು

   A good practice that you would suggest your client for hair care is
   (A) wash the hair in hot water
   (B) comb the hair for a long period
   (C) rinse the hair with cold water after shampooing
   (D) scrub the hair end thoroughly while shampooing

7. ಸೌಂದರ್ಯ ಸಂಸ್ಥೆಯಲ್ಲಿ ತರಬೇತುದಾರನ ಕಾರ್ಯ
   (A) ಔದ್ಯೋಗಿಕ ಕೌಶಲ್ಯವನ್ನು ಕಲಿಸುವುದು ಮತ್ತು ಕಲಿಕೆಯನ್ನು ಮಾಪಿಸುವುದು
   (B) ಸೌಂದರ್ಯ ಸೇವಾ ಪ್ರದೇಶಕ್ಕೆ ಆಗಮಿಸುವವರನ್ನು ಸ್ವಾಗತಿಸುವುದು
   (C) ದಿನನಿತ್ಯದ ವ್ಯವಹಾರದಲ್ಲಿ ಸಹೋದ್ಯೋಗಿಗಳನ್ನು ಬೆಂಬಲಿಸುವುದು
   (D) ಗ್ರಾಹಕರಿಗೆ ಮುಖದ ತ್ವಚೆ ಮತ್ತು ದೇಹದ ಚಿಕಿತ್ಸೆಗಳನ್ನು ನೀಡುವುದು

   The function of a trainer in a beauty organisation is to
   (A) teach occupational skills and assess learning
   (B) receive the people entering the organisation
   (C) support colleagues in the day to day running of business
   (D) carry out face and body treatment for the clients

8. ಸ್ನಿಗ್ಧತೆಯನ್ನು ಹೊಂದಿರುವ ಜೊತೆಗೆ ಸಂರಕ್ಷಕವಾಗಿ ವರ್ತಿಸುವ ಶ್ಯಾಂಪೂವಿನ ಘಟಕ
   (A) ಸೋಡಿಯಂ ಲಾರೆಥ್ ಸಲ್ಫೇಟ್ (B) ಸಿಟ್ರಿಕ್ ಆಮ್ಲ
   (C) ಡಿಅಯಾನೀಕೃತ ನೀರು (D) ಸೋಡಿಯಂ ಕ್ಲೋರೈಡ್

   The ingredient that adjusts the viscosity of shampoo besides acting as a preservative is
   (A) sodium laureth sulphate (B) citric acid
   (C) deionised water (D) sodium chloride

9. ಬಿರುಸಾದ ಆದರೆ ನಮ್ಯತೆಯನ್ನು ಹೊಂದಿರುವ, ಲವಣಾಂಶವಿಲ್ಲದ, ಜೀವಿಗೆ ರಕ್ಷಣೆ ನೀಡುವ ಹೊರಪದರವೇ
   (A) ಕೋಶಪೊರೆ (B) ಕ್ಯೂಟಿಕಲ್
   (C) ಕೋಶಭಿತ್ತಿ (D) ಎಂಡೋಡರ್ಮ್

   A tough but flexible, non-mineral outer covering that provides protection to the organism is
   (A) cell membrane (B) cuticle
   (C) cell wall (D) endoderm

10. ಚರ್ಮವನ್ನು ಪುನಶ್ಚೇತನಗೊಳಿಸಿ ಮೊಡವೆಗಳನ್ನು ಕಡಿಮೆ ಮಾಡುವ ಆಲ್ಫಾ ಹೈಡ್ರಾಕ್ಸಿ ಆಮ್ಲವು ಸಾಮಾನ್ಯವಾಗಿ ಇದರಲ್ಲಿ ಕಂಡುಬರುತ್ತದೆ
   (A) ಟೀ ಟ್ರೀ ಎಣ್ಣೆ (B) ಶೀತ ದ್ರವಿತ ಆಲೀವ್ ಎಣ್ಣೆ
   (C) ಸಾವಯವ ಮೊಸರು (D) ಬೇವು

   Alpha hydroxy acid which helps the skin rejuvenate and reduce acne scarring is generally present in
   (A) Tea tree oil (B) Cold pressed olive oil
   (C) Organic yoghurt (D) Neem



https://www.karnatakaboard.com/

II. ಸೂಕ್ತವಾದ ಉತ್ತರದಿಂದ ಬಿಟ್ಟಿರುವ ಸ್ಥಳವನ್ನು ಭರ್ತಿ ಮಾಡಿ : $4 \times 1 = 4$

Fill in the blanks with suitable answers :

11. ಭಾರತದಲ್ಲಿ 1995 ರಲ್ಲಿ ಸಾಪನೆಗೊಂಡ, ಮೆನಿಕ್ಯೂರ್ ಕಿಟ್ ಅನ್ನು ಉತ್ಪಾದಿಸುವ ಮೊದಲ ಅಂತಾರಾಷ್ಟ್ರೀಯ ಬ್ರ್ಯಾಂಡ್ ..................... .

    The first manicure kit producing international brand that was launched in India in 1995 is .......................... .

12. ವ್ಯಾಕ್ಸಿಂಗ್‌ನ ನಂತರ ಚರ್ಮದ ಮೇಲೆ ಅಳಿದುಳಿದ ಕೂದಲುಗಳನ್ನು ಕೀಳಲು ಬಳಸುವ ಸಾಧನ ..................... .

    The tool used to pluck stray hairs that are remaining after waxing is .......................... .

13. ಟ್ರಾಕ್ಷನ್ ಎಂಬುದು ಒಂದು ವಿಧದ ..................... .

    Traction is a type of ....................... .

14. ಪುರುಷರು ಮತ್ತು ಮಹಿಳೆಯರು ಸೌಂದರ್ಯ ವರ್ಧಕ ಚಿಕಿತ್ಸೆಗಳನ್ನು ಪಡೆಯಲು ಸ್ಥಾಪಿಸಲಾದ ಸ್ಥಳ ..................... .

    An establishment dealing with cosmetic treatments for men and women is a ........................ .

III. 15. ***A-ಪಟ್ಟಿ***ಯಲ್ಲಿರುವ ಆಹಾರದ ಗುಂಪುಗಳನ್ನು ***B-ಪಟ್ಟಿ***ಯಲ್ಲಿರುವ ಅವುಗಳ ಪ್ರಾಮುಖ್ಯತೆಯೊಂದಿಗೆ ಹೊಂದಿಸಿ ಬರೆಯಿರಿ : $4 \times 1 = 4$

Match the food groups in **Column-A** with their importance in **Column-B** :

| ***A-ಪಟ್ಟಿ*** ***Column-A*** | ***B-ಪಟ್ಟಿ*** ***Column-B*** |
|---|---|
| i) ಹಣ್ಣು ಮತ್ತು ತರಕಾರಿಗಳು Fruits and vegetables | a) ಜೀವಸತ್ವಗಳು ವಿಲೀನಗೊಳ್ಳಲು ಅವಶ್ಯಕ necessary for dissolving vitamins |
| ii) ಪ್ರೋಟೀನ್‌ಗಳು Proteins | b) ಹೆಚ್ಚಿನ ಜೀವಸತ್ವ ಮತ್ತು ಖನಿಜಾಂಶಗಳನ್ನು ಒದಗಿಸುತ್ತವೆ provide lots of vitamins and minerals |
| iii) ಕಾರ್ಬೋಹೈಡ್ರೇಟ್‌ಗಳು Carbohydrates | c) ಆಮ್ಲಜನಕ ಸಾಗಾಣಿಕೆಗೆ ಅವಶ್ಯಕ necessary for transporting oxygen |
| iv) ಕೊಬ್ಬಿನಂಶದ ಆಹಾರ Fatty food | d) ಕೋಶಗಳ ಬೆಳವಣಿಗೆ ಮತ್ತು ದುರಸ್ತಿಗೆ ಅವಶ್ಯಕ necessary to bring about growth and repair of cells |
| | e) ಬಲಿಷ್ಠವಾದ ಹಲ್ಲು ಮತ್ತು ಮೂಳೆಗಳಿಗೆ ಕ್ಯಾಲ್ಸಿಯಂ ಒದಗಿಸುತ್ತದೆ provide calcium for strong teeth and bones |
| | f) ಶಕ್ತಿಯನ್ನು ನಿಧಾನವಾಗಿ ಬಿಡುಗಡೆಗೊಳಿಸಿ ಇಡೀ ದಿನ ಶಕ್ತಿ ಕಳೆದುಹೋಗದಂತೆ ಮಾಡುತ್ತದೆ provide long lasting, slow release of energy |
| | g) ಸುಲಭ ಜೀರ್ಣಕ್ರಿಯೆಗೆ ನೀರು ಮತ್ತು ನಾರನ್ನು ಒದಗಿಸುತ್ತದೆ provide water and roughage for easy digestion |



https://www.karnatakaboard.com/

IV. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $6 \times 1 = 6$

Answer the following questions :

16. ತೋರು ಬೆರಳಿನ ತುದಿಗಳ ರಿಫ್ಲೆಕ್ಸ್ ಪಾಯಿಂಟ್‌ಗಳ ಮೇಲೆ ಒತ್ತಡವನ್ನು ಹಾಕುವುದರಿಂದಾಗುವ ಪರಿಣಾಮವೇನು ?

    What is the effect of applying pressure on the tip of reflex points of forefingers ?

17. ಉಗುರು ಬಫಿಂಗ್ ಎಂದರೇನು ?

    What is nail buffing ?

18. ಕಾಲಿನ ವ್ಯಾಕ್ಸಿಂಗ್ ಮಾಡಬೇಕಾದಾಗ ಇರಬೇಕಾದ ಕೂದಲುಗಳ ಉದ್ದವೆಷ್ಟು ?

    What is the ideal length of hair on the legs for waxing ?

19. ಸೌಂದರ್ಯ ಸಂಸ್ಥೆಯಲ್ಲಿ ಯಾರನ್ನು ಉತ್ಪಾದಕರು ಎನ್ನುವರು ?

    Who is a manufacturer in a beauty organisation ?

20. ಸೌಂದರ್ಯ ಚಿಕಿತ್ಸಕರು ಪೆಡಿಕ್ಯೂರ್ ಮಾಡುವಾಗ ಫುಟ್‌ಕ್ರೀಮ್ ಅಥವಾ ಲೋಷನ್‌ಗಳನ್ನು ಏಕೆ ಲೇಪಿಸುತ್ತಾರೆ ?

    During pedicure, beauticians apply foot cream or lotions. Why ?

21. ಅಂಜುಮ್ ತನ್ನ ಗ್ರಾಹಕಿಯ ತೋಳುಗಳಿಗೆ ವ್ಯಾಕ್ಸ್ ಅನ್ನು ಲೇಪಿಸುವ ಮೊದಲು ಕಾರ್ನ್‌ಸ್ಟಾರ್ಚ್ ಅಥವಾ ಬೇಬಿ ಪೌಡರ್ ಹಚ್ಚುತ್ತಾಳೆ. ಅವಳು ಏಕೆ ಹೀಗೆ ಮಾಡುತ್ತಾಳೆ ?

    Anjum dusts her client's arms with cornstarch or baby powder before applying wax. Why does she do so ?

V. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $6 \times 2 = 12$

Answer the following questions :

22. ಸಾಗರ್ ಒಳ್ಳೆಯ ಕ್ರೀಡಾಪಟು. ಅವನ ಸಾಮರ್ಥ್ಯವನ್ನು ಹೆಚ್ಚಿಸಲು ಉತ್ತಮ ಆಹಾರ ಕ್ರಮವನ್ನು ಸೂಚಿಸಿ.

    Sagar is a good sportsman. Suggest him a good diet which enhances his ability.

23. ಸೌಂದರ್ಯದಾಯಕ ನಿದ್ರೆಯ ಯಾವುದಾದರೂ ನಾಲ್ಕು ಉಪಯೋಗಗಳನ್ನು ತಿಳಿಸಿ

    Mention any four benefits of beauty sleep.

    ***ಅಥವಾ / OR***

    ಯೋಗ ವ್ಯಾಯಾಮದ ಯಾವುದಾದರೂ ನಾಲ್ಕು ಭಂಗಿಗಳನ್ನು ಹೆಸರಿಸಿ.

    Mention any four postures of Yoga.



https://www.karnatakaboard.com/

24. ಸ್ಟೆರಿಲೈಸೇಷನ್‌ನ ಯಾವುದಾದರೂ ಎರಡು ವಿಧಾನಗಳನ್ನು ಹೆಸರಿಸಿ.

Mention any two methods of sterilisation.

25. ಕಾಲಿನ ವ್ಯಾಕ್ಸಿಂಗ್ ಮಾಡುವ ವೃತ್ತಿಪರರ ವಸ್ತ್ರ ಸಂಹಿತೆಯನ್ನು ವಿವರಿಸಿ.

Explain the dress code of a foot waxing practitioner.

26. ಚರ್ಮದ ನಾಲ್ಕು ವಿಧಗಳನ್ನು ಹೆಸರಿಸಿ.

Mention the four types of skin.

***ಅಥವಾ / OR***

ಮೊಡವೆಗಳು ಉಂಟಾಗಲು ಕಾರಣಗಳೇನು ?

What are the causes for acne ?

27. ವ್ಯಕ್ತಿಯೊಬ್ಬರ ಮುಖದ ಮೇಲೆ ಬೇಡದ ಕೂದಲುಗಳಿವೆ. ಸೌಂದರ್ಯ ಸಂಸ್ಥೆಯಲ್ಲಿ ಈ ಕೂದಲುಗಳನ್ನು ಶಾಶ್ವತವಾಗಿ ತೆಗೆಸಲು ಯಾರನ್ನು ಸಂಪರ್ಕಿಸಬೇಕು ? ಅವರು ಕೂದಲನ್ನು ತೆಗೆಯುವ ವಿಧಾನವನ್ನು ಹೆಸರಿಸಿ.

A person has unwanted hair on her face. Whom should she consult in the beauty organisation ? Name the method by which they remove the hair.

VI. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $4 \times 3 = 12$

Answer the following questions :

28. ಸಾಮಾನ್ಯ ಮೆಹೆಂದಿ ತಯಾರಿಕೆಯ ವಿಧಾನವನ್ನು ವಿವರಿಸಿ.

Explain the method of general mehendi preparation.

***ಅಥವಾ / OR***

ಮೆನಿಕ್ಯೂರ್ ಮಾಡುವಾಗ ಸ್ಕ್ರಬಿಂಗ್ ಅನ್ನು ಹೇಗೆ ಕೈಗೊಳ್ಳುತ್ತಾರೆ ? ವಿವರಿಸಿ.

How is scrubbing carried out during manicure ? Explain.

29. ಪೆಡಿಕ್ಯೂರ್‌ನ ಈ ಹಂತಗಳನ್ನು ಕ್ರಮವಾಗಿ ಜೋಡಿಸಿ :

Arrange the steps of pedicure in the systematic order :

a) ಕ್ಯೂಟಿಕಲ್ ತೆಗೆಯುವುದು

Cuticle removing

b) ಉಗುರನ್ನು ಬಫ್ ಮಾಡುವುದು

Nail buffing

c) ಸ್ಕ್ರಬಿಂಗ್

Scrubbing

d) ಉಗುರಿನ ಬಣ್ಣವನ್ನು ತೆಗೆಯುವುದು

Nail polish removing

e) ಪಾದಗಳನ್ನು ನೀರಿನಲ್ಲಿ ನೆನೆಸುವುದು

Soaking the feet in warm water

f) ಉಗುರು ಕತ್ತರಿಸುವುದು ಮತ್ತು ಫೈಲಿಂಗ್ ಮಾಡುವುದು

Nail cutting and filing



https://www.karnatakaboard.com/

30. ಕಂಡೀಷನರ್‌ಗಳು ಎಂದರೇನು ? ಸಾಮಾನ್ಯವಾಗಿ ಅವುಗಳು ಆಮ್ಲೀಯವಾಗಿ ಇರುತ್ತವೆ. ಏಕೆ ?

What are conditioners ? They are frequently acidic in nature. Why ?

31. ಐ ಷಾಡೋ ಹಚ್ಚುವ ವಿಧಾನವನ್ನು ಸಂಕ್ಷಿಪ್ತವಾಗಿ ವಿವರಿಸಿ.

Explain the application of eye shadow briefly.

VII. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $3 \times 4 = 12$

Answer the following questions :

32. ಕಮಲ ಕುತ್ತಿಗೆ ಮತ್ತು ಭುಜಗಳಲ್ಲಿನ ನೋವು ಮತ್ತು ಆಯಾಸದಿಂದ ಬಳಲುತ್ತಿದ್ದಾರೆ. ಅವುಗಳನ್ನು ಪರಿಹರಿಸಲು ನೀವು ನೀಡುವ ಒತ್ತಡ ಬಿಂದುಗಳನ್ನು ವಿವರಿಸಿ.

Kamala is suffering from fatigue in neck and shoulders. Explain the pressure points that you follow to reduce them.

33. ರಾಸಾಯನಿಕಗಳಿಲ್ಲದೇ ಹಣ್ಣುಗಳನ್ನು ಬಳಸಿ ಮನೆಯಲ್ಲೇ ತಯಾರಿಸಬಹುದಾದ ಯಾವುದಾದರೂ ನಾಲ್ಕು ಬ್ಲೀಚ್‌ಗಳನ್ನು ವಿವರಿಸಿ.

Explain any four bleaches that can be prepared at home by using fruits and are free from chemicals.

***ಅಥವಾ / OR***

ಅನುಳ ಮುಖದ ಮೇಲೆ ಮೂಡಿರುವ ಬ್ಲಾಕ್‌ಹೆಡ್ ಮತ್ತು ವೈಟ್‌ಹೆಡ್‌ಗಳ ನಿವಾರಣೆಗಾಗಿ ಒಬ್ಬ ಪ್ರಸಾಧನ ತಜ್ಞೆಯಾಗಿ ನೀವು ಅನುಸರಿಸುವ ಹಂತಗಳನ್ನು ವಿವರಿಸಿ.

Explain the steps that you follow as a beauty therapist to remove the black heads and white heads formed on Anu's face.

34. ಒಂದು ವ್ಯಾಯಾಮವಾಗಿ ಬೆಟ್ಟ ಹತ್ತುವುದರ ಪ್ರಯೋಜನಗಳನ್ನು ಪಟ್ಟಿಮಾಡಿ.

List the benefits of hill climbing as an exercise.

***ಅಥವಾ / OR***

ಮೇಲುಕ್ಕೆ ಚಾಚುವ ನಮ್ಯತೆಯ ಯಾವುದಾದರೂ ನಾಲ್ಕು ವ್ಯಾಯಾಮಗಳನ್ನು ಹೆಸರಿಸಿ.

Mention any four stretching exercises for upper arms.



https://www.karnatakaboard.com/

https://www.karnatakaboard.com/